ಬಿಡುಗಡೆಯಾಗಿರುವ ಹಣದ ವಿವರ ಹಾಗೂ ಶುಲ್ಕ ಮರುಪಾವತಿಸಲು ಬಾಕಿ ಇರುವ ಬಿಲ್ಲುಗಳ ವರ್ಷವಾರು ವಿವರ ಈ ಕೆಳಗೆ ನಮೂದಿಸಿದೆ.

(ರೂ . ಲಕ್ಷಗಳಲ್ಲಿ)

ವರ್ಷ	ಒಟ್ಟು ಬಿಡುಗಡೆಯಾದ ಮೊತ್ತ	ಬಾಕಿ ಉಳಿದಿರುವ ಮೊತ್ತ
1	**5**	**6**
2004–05	1242.20	296.147
2005–06	1651.69	360.496
2006–07	2759.52	177.722
2007–08	3430.70	339.473
2008–09	4106.54	1555.183
2009–10	4500.00	3239.722
2010–11	4500.00	7179.321
2011–12	3500.00	1957.28
ಒಟ್ಟು	**25690.65**	**15105.344**

*** ಅಕ್ಟೋಬರ್ 2011ರ ಅಂತ್ಯಕ್ಕೆ**

(ಆ) ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಂದ ಬಂದ ಅರ್ಜಿಗಳನ್ನು ಮಂಜೂರು ಮಾಡಲು ಇರುವ ಮೊತ್ತ ಒದಗಿಸಿದ ಅನುದಾನಕ್ಕಿಂತ ಹೆಚ್ಚಿಗೆ ಆಗಿರುತ್ತದೆ. ಅನುದಾನದ ಕೊರತೆಯಿಂದ ಬಾಕಿ ಬಿಲ್ಲುಗಳನ್ನು ಮರುಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ.

(ಇ) ಹೌದು.

(ಈ) ಬಾಕಿ ಇರುವ ಶುಲ್ಕ ಮರುಪಾವತಿ ಬಿಲ್ಲುಗಳನ್ನು ಪಾವತಿಸಲು ಪ್ರಯತ್ನಿಸಲಾಗುತ್ತಿದೆ.

ಕಾರಾಗೃಹಗಳಿಗೆ ಶಾಸಕರು ಭೇಟಿ ಪ್ರವೇಶಕ್ಕೆ ನಿಯಮಗಳು

235 (215) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) :– ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು. ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ರಾಜ್ಯದಲ್ಲಿರುವ ಕಾರಾಗೃಹಗಳಲ್ಲಿನ ಭೇಟಿಗೆ ಶಾಸಕರಿಗೆ ಇರುವ ನಿಯಮಗಳೇನು? ಹಾಗೆಯೇ ಸಾರ್ವಜನಿಕರ ಭೇಟಿಗೆ ಇರುವ ನಿಯಮಗಳೇನು? ಪ್ರತ್ಯೇಕವಾದ ವಿವರ ನೀಡುವುದು.

ಶ್ರೀ ಎ. ನಾರಾಯಣಸ್ವಾಮಿ: (ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು).–

ರಾಜ್ಯದಲ್ಲಿರುವ ಕಾರಾಗೃಹಗಳಿಗೆ ಶಾಸಕರ ಭೇಟಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ರೀತಿಯ ನಿಯಮಗಳಿರುವುದಿಲ್ಲ. ಆದಾಗ್ಯೂ, 1974ರ ಕೆ.ಪಿ.ಆರ್. ನಿಯಮ 187ರಲ್ಲಿ ಕೇಂದ್ರ ಕಾರಾಗೃಹ ಮತ್ತು ಜಿಲ್ಲಾ ಕಾರಾಗೃಹಗಳ ಸಂದರ್ಶಕರ ಮಂಡಳಿಗೆ ಸರ್ಕಾರವು ಅಧಿಕಾರೇತರ ಸದಸ್ಯರನ್ನು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಬಹುದಾಗಿದೆ. ಸದರಿ ಮಂಡಳಿಯಲ್ಲಿ ಇತರ ಅಧಿಕಾರೇತರ ಸದಸ್ಯರೊಂದಿಗೆ 3 ಜನ ಶಾಸಕರನ್ನು ಕೇಂದ್ರ ಕಾರಾಗೃಹಗಳಿಗೆ ಹಾಗೂ ಇಬ್ಬರು ಶಾಸಕರನ್ನು ಜಿಲ್ಲಾ ಕಾರಾಗೃಹಗಳಿಗೆ ನಾಮನಿರ್ದೇಶನ ಮಾಡಲು ನಿಯಮಗಳಲ್ಲಿ ಅವಕಾಶವಿದೆ. ಸದರಿ ಮಂಡಳಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಿದ್ದು, ಮಂಡಳಿಯು 3 ತಿಂಗಳಿಗೊಮ್ಮೆ ಸಭೆ ಸೇರಿ ಕಾರಾಗೃಹದ ಆಡಳಿತ, ಶಿಸ್ತು ಕುಂದುಕೊರತೆ ಹಾಗೂ ಬಂದಿಗಳ ದೂರುಗಳನ್ನು ಪರಿಶೀಲಿಸಿ ಅಗತ್ಯ ಕ್ರಮಕ್ಕಾಗಿ ಶಿಫಾರಸ್ಸು ಮಾಡಬಹುದಾಗಿದೆ.

ಸಾರ್ವಜನಿಕರಿಗೆ ಭೇಟಿ ನೀಡುವ ಕುರಿತಂತೆ ಕರ್ನಾಟಕ ಕಾರಾಗೃಹಗಳ ಕೈಪಿಡಿ 1978 ಅಧ್ಯಾಯ XXXI ರಲ್ಲಿ ನಿಯಮ 592 ರಿಂದ 605 ರಲ್ಲಿ ಅವಕಾಶವಿರುತ್ತದೆ.

ಸದರಿ ನಿಯಮಗಳಲ್ಲಿ ಎ,ಬಿ ಮತ್ತು ಸಿ ದರ್ಜೆಯ ಬಂದಿಗಳ ಸಂಬಂಧಿಕರಿಗೆ ಪ್ರತಿ 15 ದಿವಸಗಳಿಗೊಮ್ಮೆ ಮತ್ತು ಸ್ನೇಹಿತರಿಗೆ/ಮಿತ್ತಿತರಿಗೆ ತಿಂಗಳಿಗೆ ಒಂದು ಬಾರಿ ಮಾತ್ರ ಸಂದರ್ಶನ ನೀಡಲು ಅವಕಾಶವಿದೆ.

ವಿಚಾರಣಾ ಬಂದಿಗಳಿಗೆ ವಾರಕ್ಕೊಮ್ಮೆ ಸಂದರ್ಶನಕ್ಕೆ ಅವಕಾಶವಿದೆ.

ಸಂದರ್ಶಕರನ್ನು ಕೆಲವು ವಿಶೇಷ ಸಂದರ್ಭವನ್ನು ಹೊರತುಪಡಿಸಿ ಭಾನುವಾರ ಮತ್ತು ಕಾರಾಗೃಹದ ರಜಾ ದಿವಸಗಳಲ್ಲಿ ಸಂದರ್ಶನವನ್ನು ನೀಡುವಂತಿಲ್ಲ.

ಸಂದರ್ಶನದ ಕೋರಿಕಾ ಅರ್ಜಿಗಳನ್ನು ಜೈಲಿನ ಮುಖ್ಯದ್ವಾರದಲ್ಲಿ ಅಳವಡಿಸಿರುವ ಬಾಕ್ಸ್ ನಲ್ಲಿ ಸಂಗ್ರಹಿಸಿ ಮುಖ್ಯ ಅಧೀಕ್ಷಕರು/ಅಧೀಕ್ಷಕರ ಅನುಮೋದನೆ ಮೇರೆಗೆ ಸಂದರ್ಶನ ನೀಡಲಾಗುತ್ತದೆ.

ಮಹಿಳಾ ಬಂದಿಗಳಿಗೆ ಮಹಿಳಾ ಅಧಿಕಾರಿ/ಸಿಬ್ಬಂದಿಗಳ ಸಮ್ಮುಖದಲ್ಲಿ ಸಂದರ್ಶನ ನೀಡಲಾಗುತ್ತದೆ.

ಒಬ್ಬ ಬಂದಿಗೆ ನೀಡುವ ಸಂದರ್ಶನ ಅವಧಿ 45 ನಿಮಿಷಗಳು ಮಾತ್ರ ಇರುತ್ತದೆ.

ಒಬ್ಬ ಬಂದಿಗೆ ಒಂದು ಬಾರಿಗೆ ಒಟ್ಟಿಗೆ 04 ಜನಕ್ಕಿಂತ ಹೆಚ್ಚಿಗೆ ಸಂದರ್ಶನಕಾರರನ್ನು ಭೇಟಿ ಮಾಡಲು ಅವಕಾಶವಿರುವುದಿಲ್ಲ. ಆದರೆ ಆತನ ಹತ್ತಿರದ ಸಂಬಂಧಿಕ ಸಂದರ್ಶನಕಾರರು 06 ಜನಕ್ಕಿಂತ ಹೆಚ್ಚಿಗೆ ಇರುವಂತಿಲ್ಲ. ಅಧೀಕ್ಷಕರು ಕೆಲವೊಮ್ಮೆ ವಿಶೇಷ ಕಾರಣಗಳ ಮೇರೆಗೆ ಸಂದರ್ಶನವನ್ನು ರದ್ದುಪಡಿಸಬಹುದು.

ನಕ್ಸಲ್ ನಿಗ್ರಹ ಪಡೆ

236 (12) ಶ್ರೀ ವಸಂತಬಂಗೇರ. ಕೆ (ಬೆಳ್ತಂಗಡಿ) :– ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು. ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ನಕ್ಸಲ್ ನಿಗ್ರಹ ಪಡೆಯನ್ನು ಯಾವಾಗ ಆರಂಭಿಸಲಾಯಿತು; ಈ ಪಡೆಯ ಅಧಿಕಾರ ವ್ಯಾಪ್ತಿ ಏನು;

(ಆ) ಕಾರ್ಕಳದಲ್ಲಿ ಕೇಂದ್ರ ಸ್ಥಾನ ಹೊಂದಿರುವ ನಕ್ಸಲ್ ನಿಗ್ರಹ ಪಡೆಯಲ್ಲಿ ಮಂಜೂರು ಹುದ್ದೆಗಳೆಷ್ಟು; (ಪ್ರಸ್ತುತ ಎಷ್ಟು ಸಿಬ್ಬಂದಿಗಳಿದ್ದಾರೆ;)

(ಇ) ಆರಂಭದಿಂದ ಈವರೆಗೆ ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿಗಳಿಗೆ ನೀಡಿದ ವೇತನ ಮತ್ತು ಇತರೆ ಭತ್ಯೆಗಳ ಮೊತ್ತ ಎಷ್ಟು;

(ಈ) ನಕ್ಸಲ್ ನಿಗ್ರಹ ಪಡೆಗೆ, ಆರಂಭದಿಂದ ಈವರೆಗೆ, ವಾಹನ ಖರೀದಿ, ಶಸ್ತ್ರಾಸ್ತ್ರ ಖರೀದಿ ಮತ್ತು ಇತರ ಮೂಲಭೂತ ಸೌಕರ್ಯಗಳಿಗಾಗಿ ವ್ಯಯಿಸಿದ ಮೊತ್ತ ಎಷ್ಟು(ವಿವರಗಳನ್ನು ವರ್ಷವಾರು ನೀಡುವುದು)?